**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ತಂದೆ ಚಿದಾನಂದಪ್ಪನಿಗೆ 5 ಜನ ಅಣ್ಣ ತಮ್ಮಂದಿರು ಇರುತ್ತಾರೆ. ನನ್ನ ತಂದೆ ಚಿದಾನಂದಪ್ಪ ರವರ ದೊಡ್ಡ ಅಣ್ಣನ ಹೆಸರು ಪೂಜಾರಿ ದಾಸರ ಓಬಯ್ಯ. ಅವರು ಚಳ್ಳಕೆರೆ ತಾ.ಹನುಮಂತನಹಳ್ಳಿಯಲ್ಲಿ ವಾಸಿಸುತ್ತಾರೆ. ನನ್ನ ತಂದೆ 2 ನೇ ಮಗ ಇರುತ್ತಾರೆ. 3 ನೇಯವರ ಹೆಸರು ಮುಕುಂದಪ್ಪ ಇರುತ್ತದೆ. ಅವರು ಚಳ್ಳಕೆರೆ ತಾ. ಬೊಮ್ಮಕ್ಕನಹಳ್ಳಿಯಲ್ಲಿ ವಾಸಿಸುತ್ತಾರೆ. 4 ನೇಯವರು ಗೋವಿಂದಪ್ಪ. ಇವರು ಚಳ್ಳಕೆರೆ ತಾ. ಬೇಡರೆಡ್ಡಿಹಳ್ಳಿಯಲ್ಲಿ ವಾಸಿಸುತ್ತಾರೆ. 5 ನೇಯವರು ಪ್ರಹ್ಲಾದ. ಇವರು ಹನುಮಂತನಹಳ್ಳಿ ಚಳ್ಳಕೆರೆ ತಾ. ನಲ್ಲಿ ವಾಸಿಸುತ್ತಾರೆ. ನನ್ನ ತಾತ ಪೂಜರಿ ದೊಡ್ಡ ಒಬಯ್ಯ ಮೂಲ ಊರು ಬೇಡರಡ್ಡಿಹಳ್ಳಿ ಇರುತ್ತದೆ.

2. ನನ್ನ ತಾಯಿ ಊರು ಗೋಣೂರು ಎಂದರೆ ಸರಿ. ನನ್ನ ತಂದೆ ಮದುವೆಯಾದ ಮೇಲೆ ನನ್ನ ತಾಯಿಯೊಂದಿಗೆ ಗೋಣೂರಿನಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ತಾಯಿಗೆ ನಾವು 5 ಜನ ಮಕ್ಕಳು ಇರುತ್ತೇವೆ. ಮೊದಲನೆ ಮಗ ಲೋಕೇಶ್ 2 ನೇ ಪ್ರತಿವಾದಿ ಇರುತ್ತಾರೆ. ಲೋಕೇಶ್ 2 ನೇ ಪ್ರತಿವಾದಿಗೆ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿಯ ಹೆಸರು ಮೀನಾಕ್ಷಮ್ಮ. 2 ನೇ ಹೆಂಡತಿಯ ಹೆಸರು ಶೋಭ. ಈಗ ಲೊಕೇಶ್ ತಮ್ಮ 2 ನೇ ಹೆಂಡತಿಯೊಂದಿಗೆ ಬೆಂಗಳೂರಿನಲ್ಲಿ ವಾಸಿಸುತ್ತಾರೆ. ಮೀನಾಕ್ಷಮ್ಮ ನನ್ನ ತಾಯಿಯೊಂದಿಗೆ ವಾಸಿಸುತ್ತಾರೆ ಎಂದರೆ ಸರಿ. ಮೀನಾಕ್ಷಮ್ಮನಿಗೆ ಇಬ್ಬರು ಹೆಣ್ಣು ಮಕ್ಕಳು ಮೋನಿಕಾ ಹಾಗೂ ವಂಶಿಕ. ಅವರಿಬ್ಬರ ಮದುವೆಯನ್ನು ಮಾಡಲಾಗಿದೆ. ಅವರು ತಮ್ಮ ತಾಯಿ ಮೀನಾಕ್ಷಮ್ಮನೊಂದಿಗೆ ವಾಸಿಸುತ್ತಿದ್ದರು.

3. ನಾನು ನಮ್ಮ ತಂದೆಯ 2 ನೇ ಮಗ ಇರುತ್ತೇನೆ. 3 ನೇ ಮಗನ ಹೆಸರು ಅಶೋಕ್ (1 ನೇ ವಾದಿ) ಇರುತ್ತಾರೆ. 4 ನೇ ಮಗ ಪೂಜರಿ ಓಬಣ್ಣ (2 ನೇ ವಾದಿ) ಇರುತ್ತಾನೆ. 5 ನೇ ಮಗನ ಹೆಸರು ಮೃತ್ಯುಂಜಯ ಇರುತ್ತದೆ. ಮೃತ್ಯುಂಜಯನ ಹೆಂಡತಿಯ ಮಗಳು 4 ಮತ್ತು

5 ನೇ ವಾದಿ ಇರುತ್ತಾರೆ. ಮೃತ್ಯುಂಜಯ ತೀರಿಕೊಂಡ ಮೇಲೆ 4 ಮತ್ತು 5 ನೇ ವಾದಿಗಳು 1 ನೇ ಪ್ರತಿವಾದಿಯೊಂದಿಗೆ ವಾಸಿಸುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತು ಪೂರ್ವ ಪಶ್ಚಿಮ 40 ಅಡಿ ಹಾಗೂ ಉತ್ತರ ದಕ್ಷಿಣ 30 ಅಡಿ ಇರುತ್ತದೆ. ದಾವಾ ಸ್ವತ್ತಿನ ಪೂರ್ವದಲ್ಲಿ ಈಗ ಹೊಸದಾಗಿ ಸಿಮೆಂಟ್ ರಸ್ತೆ ಮಾಡಲಾಗಿದೆ ಎಂದರೆ ಸರಿ. ಅದರ ನಂತರ ಸೈಟ್ ಗಳು ಇವೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿ ಗೆ ರಸ್ತೆ ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಬಂಜಪ್ಪನ ಮನೆ ಇದೆ. ಬಂಜಪ್ಪನ ಮನೆ ಹಾಗೂ ದಾವಾ ಸ್ವತ್ತಿನ ಮಧ್ಯೆ ರಸ್ತೆ ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೂ ರಸ್ತೆ ಇದೆ ಎಂದರೆ ಸರಿಯಲ್ಲ. ಭಾರತಿ ತಿಪ್ಪೇಸ್ವಾಮಿಯವರ ಮನೆ ಇರುತ್ತದೆ. ಪಶ್ಚಿಮಕ್ಕೂ  ರಸ್ತೆ ಇದೆ ಎಂದರೆ ಸರಿಯಲ್ಲ. ಪಂಕಜಮ್ಮ ರವರ ಮನೆ ಇರುತ್ತದೆ. ನಿಪಿ 2 ರಲ್ಲಿ ಉತ್ತರ ಮತ್ತು ದಕ್ಷಿಣಕ್ಕೆ ಗಲ್ಲಿ ರಸ್ತೆ ಇದೆ ಎಂದು ನಮೂದಿಸಲಾಗಿದೆ.

4. ನಮ್ಮ ತಂದೆಗೆ ಸೇರಿದ ಜಮೀನು ಗೋಣೂರಿನಲ್ಲಿ ಇರುವುದಿಲ್ಲ. ಬೇಡರಹಳ್ಳಿ ಗ್ರಾಮದಲ್ಲಿ ನಮಗೆ ಸೇರಿದ ಜಮೀನು ಇರುವುದಿಲ್ಲ. ನಾನು ಗೋಣೂರು ಗ್ರಾಮದ ಶಾಲೆಯ ಹತ್ತಿರ ಮನೆ ಕಟ್ಟಿಕೊಂಡು ವಾಸಿಸುತ್ತೇನೆ ಎಂದರೆ ಸರಿ. ನಾನು ಬಾಡಿಗೆ ಮನೆಯಲ್ಲಿ 13 ವರ್ಷ ವರ್ಷದಿಂದ ವಾಸಿಸುತ್ತಿದ್ದೇನೆ. ನಾನು ಕೊರಚರ ಯಲ್ಲಪ್ಪನ ಮನೆಯಲ್ಲಿ ಬಾಡಿಗೆಗೆ ಇರುತ್ತೇನೆ. ನಾನು ಬಾಡಿಗೆ ಪತ್ರ ಮಾಡಿಕೊಂಡಿರುವುದಿಲ್ಲ.  ನಾನು ಗೋಣೂರು ಗ್ರಾಮದಲ್ಲಿ ಸ್ವಂತ ಮನೆಕಟ್ಟಿಕೊಂಡು ನಮ್ಮ ತಾಯಿಯಿಂದ ಬೇರೆ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊರಚರ ಯಲ್ಲಪ್ಪನ ಮನೆಯಲ್ಲಿ ಬಾಡಿಗೆ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 1 ನೇ ವಾದಿ ಗೋಣೂರು ಮುಖ್ಯ ರಸ್ತೆಯಲ್ಲಿ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದಾನೆ ಎಂದರೆ ಸರಿ. ಸುಮಾರು 13 ವರ್ಷದಿಂದ ಆತ ಅಲ್ಲಿ ವಾಸಿಸುತ್ತಿದ್ದಾನೆ. 1 ನೇ ವಾದಿಯ ಮನೆಯ ದಕ್ಷಿಣ ದಿಕ್ಕಿನಲ್ಲಿ 2 ನೇ ವಾದಿ ಮನೆ ಕಟ್ಟಿಕೊಂಡು ವಾಸಿಸುತ್ತಾನೆ ಎಂದರೆ ಸರಿಯಲ್ಲ. ಅಲ್ಲಿಯೇ ಬಿದ್ದು ಹೋದಿ ಮನೆಯಲ್ಲಿ ವಾಸಿಸುತ್ತಾನೆ. 2 ನೇ ವಾದಿಯ

ಮನೆಯ ಉತ್ತರ ದಿಕ್ಕಿನಲ್ಲಿ 1 ನೇ ಪ್ರತಿವಾದಿ ವಾಸಿಸುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಮ್ಮ ಕುಟುಂಬಕ್ಕೆ ಸೇರಿದ ನಿವೇಶನ ಇದೆ ಎಂದರೆ ಸರಿ. 2 ನೇ ವಾದಿ 6 ವರ್ಷದಿಂದ ಬೇರೆ ವಾಸಿಸುತ್ತಿದ್ದಾರೆ. 1 ನೇ ಪ್ರತಿವಾದಿಯವರು ತಮ್ಮ ತಂದೆಯ ಮನೆಯಲ್ಲಿ ವಾಸಿಸುತ್ತಿದ್ದಾರೆ. ನಾನು ನನ್ನ ತಂದೆ ಹಾಗೂ ನಮ್ಮ ಅಣ್ಣ ತಮ್ಮಂದಿರೆಲ್ಲಾ ಸದರಿ ಮನೆಯಲ್ಲಿ ವಾಸಿಸುತ್ತಿದ್ದೆವು ಎಂದರೆ ಸರಿ. ನಾವೆಲ್ಲಾ ಅಣ್ಣ ತಮ್ಮಂದಿರು ಅದೇ ಮನೆಯಲ್ಲಿ ಹುಟ್ಟಿರುತ್ತೇವೆ ಎಂದರೆ ಸರಿ.

6. ನಮ್ಮ ತಂದೆಗೆ ಯಾವ ಸರ್ವೇ ನಂಬರ್ ನಲ್ಲಿ ನಿವೇಶನ ಮಂಜೂರಾಗಿತ್ತು ಎಂದು ಗೊತ್ತಿಲ್ಲ. ನಮ್ಮ ತಂದೆಗೆ ಗ್ರಾಮ ಠಾಣದಲ್ಲಿ ನಿವೇಶನ ಮಂಜೂರಾಗಿತ್ತು. ನಾನು ಹಕ್ಕು ಪತ್ರ ನೋಡಿರುತ್ತೇನೆ. ಅದರಲ್ಲಿ ಗ್ರಾಮ ಠಾಣಾ ಎಂದು ನಮೂದಾಗಿರುವ ಬಗ್ಗೆ ಗೊತ್ತಿಲ್ಲ.  ನನ್ನ ಜನ್ಮ ದಿನಾಂಕ 05.07.1976 ಇರುತ್ತದೆ. ನನ್ನ ತಂದೆಗೆ ಹಕ್ಕು ಪತ್ರ ನೀಡಿದ ಬಗ್ಗೆ ನೆನಪಿರುತ್ತದೆ. ನಮ್ಮ ತಂದೆಗೆ ಹಕ್ಕು ಪತ್ರ ನೀಡಿದಾಗ ನಾನು ನನ್ನ ತಾಯಿ ವಾಸಿಸುತ್ತಿರುವ ಮನೆಯಲ್ಲಿ ವಾಸ ಮಾಡುತ್ತಿದ್ದೆ.  ಸದರಿ ಮನೆ ಮೊದಲು ಹಂಚಿನದಾಗಿದ್ದು ನಂತರ ನಾವು ಸೀಮೆಂಟ್ ಶೀಟ್ ಹಾಕಿಸಿರುತ್ತೇವೆ. ಸದರಿ ಮನೆಯ ಅಳತೆ ನೆನಪಿರುವುದಿಲ್ಲ.

7. 1 ನೇ ವಾದಿ ನನ್ನ ತಾಯಿಯ ತಂದೆ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾನೆ. ಸದರಿ ಜಾಗವನ್ನು ನಮ್ಮ ತಾತ 1 ನೇ ವಾದಿಯವರಿಗೆ ಇರಲು ನೀಡಿದ್ದರು. ಈ ಬಗ್ಗೆ ಪತ್ರ ವ್ಯವಹಾರವಾಗಿತ್ತು. 2 ನೇ ವಾದಿಯವರು ವಾಸಿಸುತ್ತಿದ್ದ ಜಾಗವನ್ನು ನಮ್ಮ ತಾತ (ತಾಯಿಯ ತಂದೆ)  ಅವರಿಗೆ ನೀಡಿದ್ದರು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರ ಆಗಿರುವುದಿಲ್ಲ. 1 ನೇ ವಾದಿಯವರಿಗೆ ನಮ್ಮ ತಾತ ನೀಡಿರುವ ಜಾಗದ ದಾಖಲಾತಿ ನಮ್ಮ ಹತ್ತಿರ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ  ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯವರು ವಾಸಿಸುತ್ತಿರುವ ಮನೆ ಅವರ ಹೆಸರಿನಲ್ಲಿ ಅವರ ತಂದೆ 1992-93 ರಲ್ಲಿ ಮಾಡಿಸಿರುತ್ತಾರೆ. ನಿಖರವಾಗಿ ನನಗೆ ಈ ಬಗ್ಗೆ ಹೇಳಲು ಬರುವುದಿಲ್ಲ.

8. ನಾವು ನಾಯಕ ಜನಾಂಗಕ್ಕೆ ಸೇರಿರುತ್ತೇವೆ ಎಂದರೆ ಸರಿ. ನಮ್ಮ ಮನೆಯ ದೇವರ ಆಹೋಬಲ ಲಕ್ಷ್ಮಿ ನರಸಿಂಹಸ್ವಾಮಿ ಬೇಡರೆಡ್ಡಿಹಳ್ಳಿ ಇರುತ್ತದೆ. ನಾವು ಮನೆಯಲ್ಲಿ ಹಿರಿಯರ ಪೂಜೆಯನ್ನು ಯುಗಾದಿ ಹಬ್ಬಕ್ಕೆ ಮಾಡುತ್ತೇವೆ. ಆ ಸಮಯದಲ್ಲಿ ನಮ್ಮ ಕುಟುಂಬದ ಎಲ್ಲಾ ಹಿರಿಯರು ಸೇರುತ್ತೇವೆ ಎಂದರೆ ಸರಿ. ಕಳೆದ ವರ್ಷ 1ನೇ ಪ್ರತಿವಾದಿಯವರು ಪೂಜೆ ಮಾಡಿದಾಗ ನಾನು ಹೋಗಿರುವುದಿಲ್ಲ. ಸದರಿ ಪೂಜೆಗೆ ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 2009 ರಲ್ಲಿ ತೀರಿಕೊಂಡಿರುತ್ತಾರೆ. ಯಾವ ದಿನಾಂಕದಂದು ನಮ್ಮ ತಂದೆಗೆ ದಾವಾ ಸ್ವತ್ತಿನ ಹಕ್ಕು ಪತ್ರ ನೀಡಲಾಗಿದೆ ಎಂದು ಗೊತ್ತಿಲ್ಲ. ನನ್ನ ತಂದೆ ಸದರಿ ಸ್ವತ್ತಿನ ಹಕ್ಕುಪತ್ರದ ಆಧಾರದ ಮೇಲೆ ತಮ್ಮ ಹೆಸರನ್ನು ದಾಖಲಿಸಿಕೊಂಡಿರುವುದಿಲ್ಲ. ನನ್ನ ತಂದೆಯ ಹೆಸರಿಗೆ ದಾವಾ ಸ್ವತ್ತಿನ ಖಾತಾ ಬದಲಾವಣೆಯಾಗಿರುವುದಿಲ್ಲ ಎಂಬ ಮಾಹಿತಿ ವಕೀಲರಿಗೆ ನೀಡಿರುತ್ತೇನೆ. ಈಗಲೂ ನಾವೆಲ್ಲಾ ಒಟ್ಟಿಗೆ ಹಬ್ಬ ಮಾಡುತ್ತೇವೆ ಎಂದರೆ ಸರಿಯಲ್ಲ. ನಾವು ಎಲ್ಲಾ ಅಣ್ಣ ತಮ್ಮಂದಿರು ಹಾಗೂ ಕುಟುಂಬದವರು ಚೆನ್ನಾಗಿ ಇದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾವೆಲ್ಲಾ ಜಗಳ ಮಾಡಿಕೊಂಡಿರುತ್ತೇವೆ. 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ವಾದಿಗಳ ಮಧ್ಯೆ ಒಮ್ಮತ ಇರುವುದಿಲ್ಲ. ವಾದಿಗಳು ಹಾಗೂ 1 ಮತ್ತು 2ನೇ ಪ್ರತಿವಾದಿಯರ ಮಧ್ಯೆ ಸಂಬಂಧ ಚೆನ್ನಾಗಿರುತ್ತದೆ ಎಂದರೆ ಸರಿಯಲ್ಲ.

9. ದಾವಾ ಸ್ವತ್ತಿನಲ್ಲಿ 1 ರಿಂದ 3ನೇ ಪ್ರತಿವಾದಿಯವರು ಮನೆ ಕಟ್ಟಲು ಪ್ರಯತ್ನಿಸಿರುವುದರಿಂದ ಹಾಗೂ ಸದರಿ ಸ್ವತ್ತು ನಮ್ಮ ತಂದೆಯ ಆಸ್ತಿಯಾದ ಕಾರಣ ನಾವು 3ನೇ ಪ್ರತಿವಾದಿಯವರ ವಿರುದ್ದ ದಾವೆ ಹೂಡಿರುತ್ತೇವೆ. 1 ರಿಂದ 3ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪ್ರಯತ್ನಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ